ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೨೭ (೧೭೪೫)

ಸದಸ್ಯರ ಹೆಸರು : ಶ್ರೀ ಅಪ್ಪಾ ಸಾಹೇಬ್ (ಅಪ್ಪು)

ಉತ್ತರಿಸುವವರು : ಶ್ರೀ ಮ. ಪಟ್ಟಣ ಶೆಟ್ಟಿ (ಜವಳಿ ಸಚಿವರು)

ಪ್ರಶ್ನೆ

ಅ) ಕೈಮಗ್ಗ ಅಭಿವೃದ್ಧಿ ನಿಗಮವು ನಷ್ಟ ಅನುಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ ನಿಗಮವು ಎಷ್ಟು ಕೋಟಿ ರೂ. ನಷ್ಟ ಅನುಭವಿಸುತ್ತಿದೆ ;

ಇ) ೫೦ ವರ್ಷ ಸೇವೆ ಪೂರೈಸಿದ ನೇಕಾರರಿಗೆ ಮಾಸಾಶನ ನೀಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ ಯಾವ ವರ್ಷದಿಂದ ಮಾಸಾಶನ ನೀಡಲಾಗುವುದು ಹಾಗೂ ಎಷ್ಟು ಮಾಸಾಶನ ನಿಗದಿ ಮಾಡಲಾಗಿದೆ (ವಿವರ ನೀಡುವುದು) ;

ಉ) ನಷ್ಟ ಅನುಭವಿಸುತ್ತಿರುವ ನಿಗಮಕ್ಕೆ ಸರ್ಕಾರ ಹೆಚ್ಚಿನ ಅನುದಾನ ನೀಡಿ ಪುನಃಶ್ಚೇತನಗೊಳಿಸುವ ಕಾರ್ಯ ಹಮ್ಮಿಕೊಳ್ಳಲಾಗಿದೆಯೇ ;

ಊ) ಇಲ್ಲವಾದಲ್ಲಿ ಕಾರಣವೇನು ?

ಉತ್ತರ

ಅ) ಹೌದು.

ಆ) ದಿನಾಂಕ : ೩೧-೩-೨೦೦೬ ರ ಅಂತ್ಯಕ್ಕೆ ನಿಗಮವು ರೂ. ೫೬.೩೨ ಕೋಟಿಗಳ ಕ್ರೋಡೀಕೃತ ನಷ್ಟವನ್ನು ಅನುಭವಿಸುತ್ತಿದೆ.

ಇ) ನೇಕಾರರಿಗೆ ಮಾಸಾಶನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಕೇಂದ್ರ ಪುರಸ್ಕೃತ ದೀನ್ ದಯಾಳ್ ಹತ್ ಕರ್ಗಾ ಪ್ರೋತ್ಸಾಹನ ಯೋಜನೆಯಡಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಪುನಶ್ಚೇತನ ಯೋಜನೆಯು ಮಂಜೂರಾಗಿದ್ದು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶೇಕಡ ೫೦:೫೦ ಅನುಪಾತದಲ್ಲಿ ಒಟ್ಟು ರೂ. ೪೦ ಕೋಟಿಗಳ ಮಾರ್ಜಿನ್ ಮನಿ ಮಂಜೂರಾಗಿರುತ್ತದೆ. ಈ ಪೈಕಿ ಕೇಂದ್ರ ಸರ್ಕಾರದಿಂದ ರೂ. ೧೦ ಕೋಟಿ ಹಾಗೂ ರಾಜ್ಯ ಸರ್ಕಾರದಿಂದ ರೂ. ೨೦ ಕೋಟಿ ಬಿಡುಗಡೆಯಾಗಿರುತ್ತದೆ. ನಿಗಮದ ಪುನಶ್ಚೇತನ ಹಾಗೂ ಬಲವರ್ಧನೆ ಯೋಜನೆಯು ಪ್ರಗತಿಯಲ್ಲಿದೆ.

ಊ) ಅನ್ವಯಿಸುವುದಿಲ್ಲ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೩೦ (೧೮೩೯)**

**ಸದಸ್ಯರ ಹೆಸರು : ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ. (ಬ್ರಹ್ಮಾವರ)**

**ಉತ್ತರಿಸುವವರು : ಶ್ರೀ ಶಿವಾನಂದ ಎನ್. ನಾಯಕ್ (ಸಣ್ಣ ಕೈಗಾರಿಕಾ ಸಚಿವರು)**

**ಪ್ರಶ್ನೆ**

ಅ) ರಾಜ್ಯದ ಸಣ್ಣ ಕೈಗಾರಿಕಾ ಉದ್ದಿಮೆದಾರರಿಗೆ ಸರ್ಕಾರದಿಂದ ನೀಡುವ ಸಹಾಯ ಧನದ ಎಷ್ಟು ಬಾಕಿ ಇರುತ್ತದೆ ಹಾಗೂ ಅದು ಎಂದಿನಿಂದ ಬಾಕಿ ಇರುತ್ತದೆ ;

ಆ) ಈ ಬಾಕಿಯಿರುವ ಸಹಾಯಧನವನ್ನು ಕೂಡಲೇ ನೀಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?